ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ.1509/2024

ಸಾಕ್ಷಿದಾರನ ಹೆಸರುಃ- ರವಿ ಕೆ.ಎಂ.
ತಂದೆ ಹೆಸರು ಃ- ಮೋಟಯ್ಯ
ವಯಸ್ಸು ಃ- 52 ವರ್ಷ
ಉದ್ಯೋಗ ಃ- ವ್ಯವಸಾಯ
ವಾಸ ಃ- ಕೆಂಚನಹಳ್ಳಿ

**ಸಾಕ್ಷಿಗೆ ದಿಃ04.05.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ:**

ಸಾಕ್ಷಿಗೆ ನಿ.ಪಿ. 2, ರಿಂದ 4 ದಾಖಲೆಗಳನ್ನು ತೋರಿಸಲಾಗಿ ತೋರಿಸಲಾಗಿ ಅವುಗಳಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿರುವುದರಿಂದ ಅವುಗಳನ್ನು ನಿಪಿ.2(ಬಿ), ನಿ.ಪಿ. 3(ಬಿ) ಮತ್ತು ನಿ.ಪಿ. 4(ಬಿ) ಎಂದು ಗುರುತಿಸಲಾಯಿತು. ನಿಪಿ.2 ರಿಂದ 4 ಕ್ಕೆ ನಾನು ಹುಲಿಯೂರುದರ್ಗ ಪೋಲಿಸ್ ಠಾಣೆಯಲ್ಲಿ ಪೋಲಿಸರ ವಿನಂತಿಯ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿ. 2 ರಿಂದ 4 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ. 2 ರಿಂದ 4 ಕ್ಕೆ ನನ್ನ ಸಮಕ್ಷಮ ಯಾರು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 26.05.2024 ರಂದು ಮಧ್ಯಾಹ್ನ 2 ಗಂಟೆಯಿಂದ 2.45 ಗಂಟೆ ಸಮಯದಲ್ಲಿ ಪೋಲಿಸರು ನನ್ನ ಹಾಗೂ ಚಾಸಾ 2 ಮತ್ತು 4 ರ ಸಮಕ್ಷಮ ನಿ.ಪಿ. 2 ರಂತೆ ಪಂಚನಾಮೆ ಮಾಡಿ ನಿ.ಪಿ 3 ರಂತೆ ಕಚ್ಚಾ ನಕಾಶೆ ತಯಾರಿಸಿ ನಮ್ಮಗಳ ಸಹಿ ಪಡೆಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇದಿನ ಹುಲಿಯೂರುದುರ್ಗ ಠಾಣಾ ಆವರಣದಲ್ಲಿ ನಿಪಿ.4 ರಂತೆ ವಾಹನ ಪರಿಶೀಲನಾ ಪಂಚನಾಮೆ ಮಾಡಿ ದ್ವಿ ಚಕ್ರ ವಾಹವನ್ನು ನ್ಮ್‌ನ ಜಪ್ತಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.** .

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುঃ- ಮಾನ್ಯ ಸ.ಸ.ಅ ರವರಿಂದ:**

ದಿಃ14.03.2019 ರಂದು ಬೆಳಗ್ಗೆ 9.30 ಸಮಯದಲ್ಲಿ ಚಾ.ಸಾ.1 ರವರು ಗಸ್ತು ಕಾರ್ಯ ನಿರ್ವಹಿಸುತ್ತಿರುವಾಗ, ಕುಣಿಗಲ್ ತಾಲ್ಲೂಕಿನ ಯಡಿಯೂರು ಹೋಬಳಿ ಸಿಂಗೋನಹಳ್ಳಿ ಗ್ರಾಮದಲ್ಲಿ ನರಸಿಂಹಯ್ಯ ಬಿನ್ ಚೌಡಯ್ಯನವರ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿರುತ್ತಾರೆ ಎಂಬ ಬಾತ್ಮಿ ಬಂದಿದ್ದು, ಅವರು ಸಿಬ್ಬಂದಿಯೊಂದಿಗೆ ಸದರಿ ಗ್ರಾಮಕ್ಕೆ ಹೋಗಿ ಬಿ.ಎಂ.ರಸ್ತೆ ಬಳಿ ನನ್ನನ್ನು ಮತ್ತು ಚಾ.ಸಾ.3 ರವನ್ನು ಬರಮಾಡಿಕೊಂಡು, ಪಂಚರಾಗಿ ಬರುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ನಾವು ಒಪ್ಪಿ ನಂತರ ಆರೋಪಿಯ ಮನೆಯ ಬಳಿ ಹೋಗಿ ನೋಡಿದಾಗ, ಅವರ ಮನೆಯ ಮುಂಭಾಗ ಒಬ್ಬ ವ್ಯಕ್ತಿ ಕುಳಿತಿದ್ದರು. ಅವರನ್ನು ಮಾತನಾಡಿಸಲಾಗಿ ಅವರೇ ಸದರಿ ನರಸಿಂಹಯ್ಯ ಎಂದು ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ಆತನಿಗೆ ಸದರಿ ಮಾಹಿತಿಯನ್ನು ತಿಳಿಸಿ ಮನೆಯನ್ನು ಶೋಧನೆಮಾಡಬೇಕಾಗಿದೆ ಎಂದು ತಿಳಿಸಿ ಚಾ.ಸಾ.1 ಮತ್ತು ನಾವು ಪರಸ್ಪರ ಅಂಗಶೋಧನೆಯನ್ನು ಮಾಡಿ ಯಾವುದೇ ವಸ್ತುಗಳನ್ನು ಇಟ್ಟುಕೊಂಡಿರುವುದಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಂಡು ಮನೆಯನ್ನು ಪ್ರವೇಶಮಾಡಿರುತ್ತೇವೆ ಎಂದರೆ ಸರಿಯಲ್ಲ.

2. ಮನೆಯಲ್ಲಿ ಎಲ್ಲಾ ಕೋಣೆಗಳನ್ನು ಪರಿಶೀಲನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮನೆಯಲ್ಲಿ ಯಾವುದೇ ಅಕ್ರಮ ಮದ್ಯ ಕಂಡುಬಂದಿರುವುದಿಲ್ಲ ಮತ್ತು ಮನೆಗೆ ಹೊಂದಿಕೊಂಡಂತೆ ಒಂದು ಷೆಡ್ ಇದ್ದು, ಅಲ್ಲಿ ಕಟ್ಟಿಗಳನ್ನು ಜೋಡಿಸಲಾಗಿತ್ತು ಎಂದರೆ ಸರಿಯಲ್ಲ. ಅದರ ಕೆಳಭಾಗದಲ್ಲಿ ಎರಡು ಬಿಳಿ ಚೀಲಗಳು ಕಂಡುಬಂದಿರುತ್ತವೆ ಎಂದರೆ ಸರಿಯಲ್ಲ. ಅವುಗಳನ್ನು ತೆಗೆದು ನೋಡಲಾಗಿ, ಒಂದು ಚೀಲದಲ್ಲಿ ಎರಡು ರಟ್ಟಿನ ಬಾಕ್ಸ್ ಗಳಿದ್ದು, ಒರಿಜಿನಲ್ ಚಾಯ್ಸ್ ವಿಸ್ಕಿ ಲೇಬಲ್ ಹೊಂದಿರುವ ಮದ್ಯದ ಟೆಟ್ರಾ ಪ್ಯಾಕ್ಗಳು ಕಂಡುಬಂದಿರುತ್ತವೆ ಎಂದರೆ ಸರಿಯಲ್ಲ. ಅದನ್ನು ತೆಗೆದು ನೋಡಲಾಗಿ 90 ಎಂ.ಎಲ್ ನ 192 ಟೆಟ್ರಾ ಪ್ಯಾಕುಗಳು ಕಂಡುಬಂದಿರುತ್ತವೆ ಎಂದರೆ ಸರಿಯಲ್ಲ. ಎರಡನೇ ಚೀಲದಲ್ಲಿ ಎರಡು ರಟ್ಟಿನ ಬಾಕ್ಸ್ ಗಳಿದ್ದು, ಅವುಗಳನ್ನು ತೆಗೆದು ನೋಡಲಾಗಿ, ಓಲ್ಡ್ ಟವರಿನ್ ವಿಸ್ಕಿ ಬ್ರಾಂಡ್ ನ 180 ಎಂ.ಎಲ್ ನ 96 ಟೆಟ್ರಾ ಪ್ಯಾಕುಗಳು ಕಂಡುಬಂದಿರುತ್ತವೆ ಎಂದರೆ ಸರಿಯಲ್ಲ. ನಂತರ ಸದರಿ ವ್ಯಕ್ತಿಯನ್ನು ಚಾ.ಸಾ.1 ರವರು ಪರವಾನಗಿ ಮತ್ತು ಬಿಲ್ಲುಗಳನ್ನು ಕೇಳಲಾಗಿ ಯಾವುದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಂತರ ಪೊಲೀಸರು ನಮ್ಮ ಸಮಕ್ಷಮ ಸದರಿ ಮದ್ಯದ ಟೆಟ್ರಾ ಪ್ಯಾಕುಗಳಿಂದ ತಲಾ 20 ಪ್ಯಾಕೆಟ್ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಸ್ಥಳದಲ್ಲೇ ಒಂದು ಕೈಚೀಲವನ್ನು ತಯಾರಿಸಿ, ಮಾದರಿ ತೆಗೆದ ಟೆಟ್ರಾ ಪ್ಯಾಕುಗಳನ್ನು ಅದರಲ್ಲಿ ತುಂಬಿಸಿ ದಾರದಿಂದ ಕಟ್ಟಿ ಸೀಲ್ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

3. ನಂತರ ಮಾದರಿ ಚೀಟಿ ಎಂಬ ನಮೂನೆಯಲ್ಲಿ ಪ್ರಕರಣದ ವಿವರ ಬರೆದು ನಮ್ಮ ಸಹಿ ಪಡೆದು ಅವುಗಳಿಗೆ ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ನ್ಯಾಯಾಲಯದ ಮುಂದಿರುವ ಮು.ಮಾಗಳನ್ನು ಘಟನಾಸ್ಥಳದಿಂದ ಜಪ್ತುಪರಿಸಿಕೊಂಡಿದ್ದರೂ ಸಹ ಮತ್ತು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.